75+110

8

11/03/2026

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್ ಎಸ್ ಗೋಪಿನಾಥ್ ಇವರು 72ನೇ ನಿಯಮದ ಮೇರೆಗೆ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:75ಕ್ಕೆ ಉತ್ತರ

**ಪ್ರಶ್ನೆ:**

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನ ಕೆ.ಸಿ ವ್ಯಾಲಿ ಯೋಜನೆಯಿಂದ ಬಿಟ್ಟುಹೋಗಿದ್ದ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ ಅನುದಾನದೊಂದಿಗೆ ಅನುಮೋದನೆ ನೀಡುವ ಕುರಿತು. ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿಯ ಸುತ್ತಮುತ್ತಲ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಈಗಾಗಲೇ ಜಾರಿಯಲ್ಲಿದೆ. ಆದರೆ, ಹೋಬಳಿಯ ಕೆಲವು ಗ್ರಾಮದ ಕೆರೆಗಳು ಈ ಯೋಜನೆ ಕೈಬಿಟ್ಟಿರುತ್ತಾರೆ. ಸದರಿ ಆನೇಕಲ್ ತಾಲ್ಲೂಕಿನ ಮುತ್ತಾನಲ್ಲೂರು ಅಮಾನಿಕೆರೆ ಪಂಪ್ ಹೌಸ್-೨ರ ಮೂಲಕ ಸಂಪರ್ಕಿಸಲು ಅನುಮೋದನೆ ನೀಡಲಾಗಿದೆ ಹಾಗೂ ಪೂರ್ಣ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಇದರ ಈ ವಿಸ್ತರಣಾ ಕಾಮಗಾರಿಗೆ ಒಟ್ಟು ರೂ.355.00 ಲಕ್ಷಗಳು (3.55 ಕೋಟಿ) ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಆದುದರಿಂದ ಈ ಕಾಮಗಾರಿ ಅತ್ಯಂತ ಅವಶ್ಯಕವಾಗಿದ್ದು ಇದನ್ನು ಸರ್ಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೆ ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೊಳ್ಳಲು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

**ಉತ್ತರ:**

ಬೆಂಗಳೂರು ನಗರ ಕೆ ಮತ್ತು ಸಿ ವ್ಯಾಲಿಯ ಸಂಸ್ಕರಣಾ ಘಟಕದಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ಆನೇಕಲ್ ತಾಲ್ಲೂಕಿನ 67-ಕೆರೆಗಳನ್ನು ಹಾಗೂ ಕನಕಪುರ ತಾಲ್ಲೂಕಿನ ರಾವುತನಹಳ್ಳಿ ಮತ್ತು ಮಾವತ್ತೂರು ಕೆರೆಗಳನ್ನು ತುಂಬಿಸುವ ಕಾಮಗಾರಿಯು ಈಗಾಗಲೇ ಪ್ರಗತಿಯಲ್ಲಿದ್ದು, ಸದರಿ ಯೋಜನೆಯಡಿಯಲ್ಲಿ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೆಲವು ಗ್ರಾಮದ ಕೆರೆಗಳಾದ ವಾಬಸಂದ್ರ ಕೆರೆ, ತಿರುಪಾಳ್ಯ, ಗವಿ ಕೆರೆ ಮತ್ತು ಯಾರಂಡಹಳ್ಳಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ರೂ.355.00 ಲಕ್ಷ ಮೊತ್ತದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ.

ಸಂಖ್ಯೆ: MID/20/LCQ/2026

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು.